RNU AIR DHARWAD

# SEPTEMBER 29, 2024

## AKASHAVANI - DHARWAD

## PRADESH SAMACHARA (KANNADA) 07.05 A.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು:**

<><><>

**ಅಕ್ಟೋಬರ್ 2, ರಾಜ್ಯಾದ್ಯಂತ 'ಗಾಂಧಿ ನಡಿಗೆ' ಹಾಗೂ 'ಸ್ವಚ್ಛತೆಯ ಪ್ರತಿಜ್ಞಾ ವಿಧಿ ಸ್ವೀಕಾರ' – ಡಿ.ಕೆ. ಶಿವಕುಮಾರ.**

- **ಕ್ರೀಡಾ ಮನೋಭಾವದ ಸ್ಪರ್ಧೆ, ಬದುಕನ್ನು ಸರ್ವಾಂಗ ಸುಂದರಗೊಳಿಸುತ್ತದೆ – ಎಚ್.ಕೆ.ಪಾಟೀಲ.**
- **ಸಂಪೂರ್ಣತಾ ಅಭಿಯಾನ, 90 ದಿನಗಳ ಬಳಿಕ ನಾಳೆ, ರಾಜ್ಯದ ಏಳು ಜಿಲ್ಲೆಗಳಲ್ಲಿ ಸಮಾರೋಪ.**
- **ಇಂದು ಬೆಳಗ್ಗೆ 11 ಗಂಟೆಗೆ, ಪ್ರಧಾನಮಂತ್ರಿಯವರಿಂದ, 'ಮನದ ಮಾತು.'**

<><><>

**ಈಗ ವಾರ್ತೆಗಳ ವಿವರ**

<><><>

**ಮಹಾತ್ಮ ಗಾಂಧೀಜಿ ಅವರು, ಬೆಳಗಾವಿಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆ ವಹಿಸಿ, ನೂರು ವರ್ಷಗಳು ಪೂರ್ಣಗೊಂಡ ಹಿನ್ನೆಲೆ, ಅಕ್ಟೋಬರ್ 2 ರಂದು ರಾಜ್ಯಾದ್ಯಂತ 'ಗಾಂಧಿ ನಡಿಗೆ' ಹಾಗೂ 'ಸ್ವಚ್ಛತೆಯ ಪ್ರತಿಜ್ಞಾ ಸ್ವೀಕಾರ' ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವರ್ಷಪೂರ್ತಿ ಕಾರ್ಯಕ್ರಮಗಳನ್ನು ಯೋಜಿಸಲಾಗಿದೆ. ಮೊದಲ ಹಂತದಲ್ಲಿ, ಅಕ್ಟೋಬರ್ 2 ರಂದು, ರಾಜ್ಯಾದ್ಯಂತ ಜಿಲ್ಲೆ, ತಾಲೂಕು ಕೇಂದ್ರ ಹಾಗೂ ಪಾಲಿಕೆ ಮಟ್ಟದಲ್ಲಿ ಗಾಂಧಿ ನಡಿಗೆ ಆಯೋಜಿತವಾಗಿದೆ. ಬುಧವಾರ ಬೆಳಗ್ಗೆ 9 ಗಂಟೆಗೆ, ಬೆಂಗಳೂರಿನ ಗಾಂಧಿ ಭವನದಿಂದ ವಿಧಾನಸೌಧದ ಗಾಂಧಿ ಪ್ರತಿಮೆ ವರೆಗೂ ನಡಿಗೆ ಜರುಗಲಿದೆ ಎಂದರು.**

<><><>

**ಬಳ್ಳಾರಿ ಜಿಲ್ಲೆ ನ್ಯಾಯಾಧೀಶರಾದ ಕೆ.ಜಿ.ಶಾಂತಿ ಅವರು, ನ್ಯಾಯಾಲಯದ ಆವರಣದಲ್ಲಿ, ಸ್ವಚ್ಛತಾ ಕಾರ್ಯಕ್ಕೆ ಚಾಲನೆ ನೀಡಿದರು. ನಮ್ಮ ಸುತ್ತಮುತ್ತಲಿನ ಪರಿಸರ ಶುಚಿಯಾಗಿದ್ದಾಗ ಮಾತ್ರ ಉತ್ತಮ ಆರೋಗ್ಯ ನಮ್ಮದಾಗುತ್ತದೆ ಎಂದರು.**

<><><>

‘ಸ್ವಚ್ಛತಾ ಕೀ ಭಾಗೀದಾರಿ’ ಉಪಕ್ರಮದಡಿ, ಗದಗ ನಗರದ ಐತಿಹಾಸಿಕ ತ್ರಿಕೋಟೇಶ್ವರ ದೇವಸ್ಥಾನ ಹಾಗೂ ಭೀ ್ಮ ಕೆರೆ ಸ್ವಚ್ಛತೆಯನ್ನು ಸ್ವಯಂಸೇವಕರು ಕೈಗೊಂಡರು. ಗದಗ ಬೆಟಗೇರಿ ನಗರಸಭೆಯ ಸಹಾಯಕ ಕಾರ್ಯಪಾಲಕ ಅಭಿಯಂತರ, ಆನಂದ್ ಬದಿ ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ.

<><><>

ಅಭಿಯಂತರ ಆನಂದ ಬದಿ ಧ್ವನಿ 35 ಸೆಕೆಂದುಗಳು

<><><>

ಬೆಂಗಳೂರಿನ ಯಲಹಂಕದ, ಕೇಂದ್ರ ಮೀಸಲು ಪೊಲೀಸ್ ಪಡೆ ಸಿ.ಆರ್.ಪಿ.ಎಫ್. ಆವರಣದಲ್ಲಿ, ಸ್ವಚ್ಛತಾ ಕಾರ್ಯ ಕೈಗೊಳ್ಳಲಾಯಿತು. 247 ವಿ.ಐ.ಪಿ. ಬೆಟಾಲಿಯನ್‌ನ ಕಮಾಂಡೆಂಟ್ ಪಿ.ಮನೋಜ್‌ಕುಮಾರ್ ಸೇರಿದಂತೆ ಸಿ.ಆರ್.ಪಿ.ಎಫ್. ಸಿಬ್ಬಂದಿ ಆವರಣವನ್ನು ಸ್ವಚ್ಛಗೊಳಿಸಿದರು.

<><><>

ರೈಲ್ವೆ ಇಲಾಖೆ ದಾವಣಗೆರೆಯ ಮುಖ್ಯ ಆರೋಗ್ಯ ನಿರೀಕ್ಷಕ ಶ್ರೀನಿವಾಸ, ರೈಲು ಪ್ರಯಾಣಿಕರಿಗೆ ಸ್ವಚ್ಛತೆ ಬಗ್ಗೆ ತಿಳಿವಳಿಕೆ ಮೂಡಿಸುವ ಕಾರ್ಯಕ್ರಮಕ್ಕೆ, ಚಾಲನೆ ನೀಡಿದರು.

<><><>

ಹಾವೇರಿ ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ, ನ್ಯಾಯಾಧೀಶ ಕೆ.ಸಿ.ಸದಾನಂದಸ್ವಾಮಿ, ಸ್ವಚ್ಛತಾ ಆಂದೋಲನಕ್ಕೆ ಚಾಲನೆ ನೀಡಿದರು.

<><><>

ಹಾವೇರಿಯ ಗುದ್ಲೆಪ್ಪ ಹಳ್ಳಿಕೇರಿ ಮಹಾವಿದ್ಯಾಲಯದ, ರಾಷ್ಟ್ರೀಯ ಸೇವಾ ಯೋಜನೆ ಸಹಯೋಗದಲ್ಲಿ, ಮಹಾತ್ಮ ಗಾಂಧಿ, ಮೈಲಾರ ಮಹಾದೇವ, ವಿ.ಕೃ. ಗೋಕಾಕ ಸೇರಿದಂತೆ, ವಿವಿಧ ವೃತ್ತಗಳನ್ನು ಸ್ವಚ್ಛ ಗೊಳಿಸಲಾಯಿತು. ನೆಹರು ಕೇಂದ್ರದ ಜಿಲ್ಲಾ ಯುವ ಅಧಿಕಾರಿ ಭುಕ್ಯಾ ಸಂಜೀವ ಚಾಲನೆ ನೀಡಿದರು.

<><><>

ಸ್ವಚ್ಛತಾ ಹೀ ಸೇವಾ ಅಭಿಯಾನದಡಿ, ‘ತಾಯಿಯ ಹೆಸರಿನಲ್ಲಿ ಗಿಡವೊಂದನ್ನು ನೆಡುವ’ ಅಭಿಯಾನಕ್ಕೆ, ಬೆಳಗಾವಿಯಲ್ಲಿ ಚಾಲನೆ ನೀಡಲಾಯಿತು.

<><><>

ಬದುಕಲು ಆಹಾರ, ನೀರು ಮತ್ತು ಬಟ್ಟೆ ಎ ಷ್ಟು ಅಗತ್ಯವೋ, ಸ್ವಚ್ಛತೆ ಕೂಡ ಅ ಷ್ಟೇ ಅಗತ್ಯ ಎಂದು, ಕೋಲಾರ ನಗರಸಭೆಯ ಅಧ್ಯಕ್ಷೆ, ಕೆ. ಲಕ್ಷ್ಮೀದೇವಮ್ಮ ಹೇಳಿದ್ದಾರೆ. ಸ್ವಚ್ಛತಾ ಅಭಿಯಾನಕ್ಕೆ ಚಾಲನೆ ನೀಡಿ ಅವರು, ಮಾತನಾಡಿದರು.

<><><>

ಚಿಕ್ಕಬಳ್ಳಾಪುರದಲ್ಲಿ, ‘ಸ್ವಚ್ಛತಾ ಹಿ ಸೇವಾ’ ಅಭಿಯಾನದಡಿ, ನಿಮ್ಮಾಕಲ ಕುಂಟೆಯ ಎರಡು ಹಾಗೂ ನಕ್ಕಲಕುಂಟೆ, ಸೂಲಾಲಪ್ಪನ ದಿನ್ನೆಯ ಸ್ಮಶಾನಗಳಲ್ಲಿ ಬೆಳೆದಿದ್ದ ಗಿಡಗಂಟಿಗಳನ್ನು, ಪೌರ ಕಾರ್ಮಿಕರು ತೆರವು ಗೊಳಿಸಿದರು.

<><><>

ಕ್ರೀಡಾ ಮನೋಭಾವದ ಸ್ಪರ್ಧೆ, ಕ್ರೀಡಾಪಟುವಿನ ಬದುಕನ್ನು ಸರ್ವಾಂಗ ಸುಂದರಗೊಳಿಸುತ್ತದೆ ಎಂದು, ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಖಾತೆ ಸಚಿವ ಎಚ್.ಕೆ.ಪಾಟೀಲ, ತಿಳಿಸಿದ್ದಾರೆ. ಗದಗ ನಗರದ ಕೆ.ಎಚ್. ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿತ, ಬೆಳಗಾವಿ ವಿಭಾಗ ಮಟ್ಟದ, ದಸರಾ ಕ್ರೀಡಾಕೂಟವನ್ನು ಉದ್ಘಾಟಿಸಿ, ಅವರು

ಮಾತನಾಡಿದರು. 2 ಕೋಟಿ ರೂಪಾಯಿ ವೆಚ್ಚದಲ್ಲಿ ಸುಸಜ್ಜಿತ ಕ್ರೀಡಾಂಗಣ ರೂಪಿಸಲಾಗಿದೆ. ಯುವ ಕ್ರೀಡಾಪಟುಗಳಿಗೆ ದಸರಾ ಕ್ರೀಡೋತ್ಸವ ಪ್ರತಿಭಾ ಪ್ರದರ್ಶನಕ್ಕೆ ವೇದಿಕೆಯಾಗಿದೆ. ಉತ್ತಮ ಪ್ರದರ್ಶನ ನೀಡಿ, ರಾಜ್ಯ ಹಾಗೂ ರಾಷ್ಟ್ರವನ್ನು ಪ್ರತಿನಿಧಿಸುವ ಹಿರಿಮೆ ಸಂಪಾದಿಸುವಂತಾಗಲಿ ಎಂದು, ಸಚಿವ ಎಚ್.ಕೆ. ಪಾಟೀಲ ಆಶಿಸಿದರು.

<><><>

ಬಳಿಕ, ಸಚಿವ ಎಚ್.ಕೆ. ಪಾಟೀಲ, ಗದಗ ತಾಲೂಕಿನ ಹುಲಕೋಟಿಯ ರೈತ ಸಂಪರ್ಕ ಕೇಂದ್ರದ ಆವರಣದಲ್ಲಿ, ಗೊದಾಮ ನಿರ್ಮಾಣ ಕಾಮಗಾರಿಗೆ, ಚಾಲನೆ ನೀಡಿದರು.

<><><>

ಹುಬ್ಬಳ್ಳಿ ತಾಲೂಕು ಮಂಟೂರು ರಸ್ತೆಯಲ್ಲಿ, ಕರ್ನಾಟಕ ಕೊಳಚೆ ಅಭಿವೃದ್ಧಿ ಮಂಡಳಿಯಿಂದ ನಿರ್ಮಿಸಲಾಗುತ್ತಿರುವ, ಸಾವಿರದ 300 ಮನೆಗಳ ಕಾಮಗಾರಿಯನ್ನು, ಮಂಡಳಿಯ ಅಧ್ಯಕ್ಷ ಪ್ರಸಾದ್ ಅಬ್ಬಯ್ಯ ವೀಕ್ಷಿಸಿದರು. ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜಿಲ್ಲೆಯಾದ್ಯಂತ 7 ಸಾವಿರದ 600 ಮನೆಗಳ ನಿರ್ಮಾಣ ಕಾಮಗಾರಿ ನಡೆಯುತ್ತಿದೆ ಎಂದು, ತಿಳಿಸಿದರು. ಎರಡನೇ ಹಂತದಲ್ಲಿ 32 ಸಾವಿರದ 600 ಮನೆಗಳನ್ನು ನಿರ್ಮಿಸಲಾಗಿದ್ದು, ಮುಂದಿನ ತಿಂಗಳಲ್ಲಿ ಮುಖ್ಯಮಂತ್ರಿಯವರು ಅರ್ಹ ಫಲಾನುಭವಿಗಳಿಗೆ ಹಸ್ತಾಂತರಿಸಲಿದ್ದಾರೆ ಎಂದರು.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಕೇಂದ್ರದ ನೀತಿ ಆಯೋಗ ಸಂಚಾಲಿತ, ಸಂಪೂರ್ಣತಾ ಅಭಿಯಾನ, 90 ದಿನಗಳ ಬಳಿಕ, ನಾಳೆ 30 ರಂದು, ರಾಜ್ಯದ ಏಳು ಜಿಲ್ಲೆಗಳ 14 ತಾಲೂಕುಗಳಲ್ಲಿ ಸಮಾರೋಪ ಗೊಳ್ಳಲಿದೆ.

<><><>

ಮಹತ್ವಾಕಾಂಕ್ಷಿ ಉತ್ತರಕನ್ನಡ ಜಿಲ್ಲೆಯ, ಅಭಿವೃದ್ಧಿ ಆಕಾಂಕ್ಷಿ ತಾಲೂಕು ಮುಂಡಗೋಡದಲ್ಲಿ, ಸಂಪೂರ್ಣತಾ ಅಭಿಯಾನದಡಿ ಆಯೋಜಿಸಲಾಗಿದ್ದ, ಬೀದಿ ನಾಟಕ ಪ್ರದರ್ಶನಕ್ಕೆ, ತಾಲೂಕು ಪಂಚಾಯ್ತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಟಿ.ವಾಯ್. ದಾಸನಕೊಪ್ಪ, ತಮಟೆ ಬಾರಿಸಿ, ಚಾಲನೆ ನೀಡಿದರು.

<><><>

ಮಹತ್ವಾಕಾಂಕ್ಷಿ ರಾಯಚೂರು ಜಿಲ್ಲೆಯ, ಆಶೋತ್ತರ ತಾಲೂಕು ಮಸ್ಕಿಯಲ್ಲಿ, ಆರು ಸೂಚ್ಯಾಂಕಗಳಡಿ, ನೂರರಷ್ಟು ಪ್ರಗತಿ ಸಾಧನೆ ಹಾಗೂ ಅರ್ಹ ಫಲಾನುಭವಿಗಳ ನೋಂದಣಿ ಖಾತ್ರಿ ಪಡಿಸಲಾಗಿದೆ. ಮಸ್ಕಿ ತಾಲೂಕಿನ ಜನರ ಜೀವನದ ಗುಣಮಟ್ಟ ಸುಧಾರಣೆ ಗುರಿಯೊಂದಿಗೆ ಆಯೋಜಿತ, ಸಂಪೂರ್ಣತಾ ಅಭಿಯಾನದ ಪ್ರಗತಿ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಮಸ್ಕಿ ತಾಲೂಕು ಪಂಚಾಯ್ತಿ ಕಾರ್ಯನಿರ್ವಹಣಾಧಿಕಾರಿ ಅಮರೇಶ ಯಾದವ.

<><><>

ತಾಲೂಕು ಪಂಚಾಯ್ತಿ ಇ.ಓ. ಅಮರೇಶ ಯಾದವ ಧ್ವನಿ 41 ಸೆಕೆಂದುಗಳು

<><><>

ಬೆಂಗಳೂರಿನ ಅಜೀಂ ಪ್ರೇಮ್‌ಜೀ ಫೌಂಡೇಷನ್, 3 ವರ್ಷಗಳ ಕಾಲ ರಾಜ್ಯದ ಶಾಲಾ ಮಕ್ಕಳಿಗೆ, ಪೂರಕ ಪೌಷ್ಟಿಕ ಆಹಾರ ಒದಗಿಸಲು, ರಾಜ್ಯ ಸರ್ಕಾರಕ್ಕೆ ಸಾವಿರದ 591 ಕೋಟಿ ರೂಪಾಯಿ ಅನುದಾನ ನೀಡಿದೆ.

<><><>

ಧಾರವಾಡ ತಾಲೂಕು ಯಾದವಾಡ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ, ಸಾಂಕೇತಿಕವಾಗಿ ಎಲ್ಲ ಮಕ್ಕಳಿಗೆ ವಾರದ 6 ದಿನ ಪೂರಕ ಪೌಷ್ಟಿಕ ಆಹಾರ ವಿತರಿಸುವ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗಿದೆ. ಧಾರವಾಡ ತಾಲೂಕು ಪಂಚಾಯಿತಿ ಕಾರ್ಯ ನಿರ್ವಾಹಕ ಅಧಿಕಾರಿ, ಗಂಗಾಧರ ಕಂದಕೂರ ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ.

<><><>

ಗಂಗಾಧರ ಕಂದಕೂರ ಧ್ವನಿ 45 ಸೆಕೆಂದುಗಳು

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಇಂದು ನಾಲ್ಕನೇ ಭಾನುವಾರ, ಬೆಳಗ್ಗೆ 11 ಗಂಟೆಗೆ, ದೇಶದ ಜನತೆಯನ್ನುದ್ದೇಶಿಸಿ, 'ಮನ್ ಕಿ ಬಾತ್' ಕಾರ್ಯಕ್ರಮದಲ್ಲಿ, ತಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳಲಿದ್ದಾರೆ. ಇದು ಮನದ ಮಾತು ಸರಣಿಯ, 114ನೇ ಆವೃತ್ತಿಯಾಗಿದ್ದು, ದಶಮಾನೋತ್ಸವ ಸಂಭ್ರಮ. ಆಕಾಶವಾಣಿ ಹಾಗೂ ದೂರದರ್ಶನದ ಎಲ್ಲ ವಾಹಿನಿಗಳು ಹಾಗೂ ಜಾಲತಾಣಗಳಲ್ಲಿ, ಮನ್ ಕಿ ಬಾತ್ ಬಿತ್ತರಗೊಳ್ಳಲಿದೆ. 3ನೇ ಅವಧಿಗೆ ಪ್ರಧಾನಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಬಳಿಕ, ನರೇಂದ್ರ ಮೋದಿ ಅವರ ನಾಲ್ಕನೇ ಮನದ ಮಾತು, ಇದಾಗಿದೆ.

<><><>

ಧಾರವಾಡದ ಭಾರತೀಯ ಸಂಗೀತ ವಿದ್ಯಾಲಯ ಹಾಗೂ ಗಾನಯೋಗಿ ಪಂಡಿತ ಪಂಚಾಕ್ಷರ ಗವಾಯಿ ಸ್ಮೃತಿ ಸಂಗೀತ ಸಭಾ, ಖ್ಯಾತ ತಬಲಾ ಪಟು ಪಂಡಿತ ಜಿ.ಎಸ್.ಹಿರೇಮಠ ಸಂಸ್ಮರಣಾರ್ಥ, ಇಂದು ಸಂಜೆ 5 ಗಂಟೆ 45 ನಿಮಿಷಕ್ಕೆ, ಸೃಜನಾ ರಂಗಮಂದಿರದಲ್ಲಿ ಸ್ವರ ನಮನ ಕಾರ್ಯಕ್ರಮ ಆಯೋಜಿಸಿವೆ. ಪದ್ಮಶ್ರೀ ಪುರಸ್ಕೃತ ಪಂಡಿತ ಎಂ.ವೆಂಕಟೇಶಕುಮಾರ ಗಾಯನ ಪ್ರಸ್ತುತ ಪಡಿಸಲಿದ್ದು, ಡಾಕ್ಟರ್ ಸಂತೋಷಕುಮಾರ ನಿಹಾರ್ ಹಾಗೂ ಉಸ್ತಾದ್ ಶಫೀಕ್ ಖಾನ್ ಅವರ ಪಿಟೀಲು ಹಾಗೂ ಸಿತಾರ್ ಜುಗಲ್‌ಬಂದಿ ಕಾರ್ಯಕ್ರಮ ಜರುಗಲಿದೆ.

<><><>

ಬೆಳಗಾವಿ ಜಿಲ್ಲೆ ಜಮಖಂಡಿಯ, ಹಿರಿಯ ಚಿತ್ರಕಲಾವಿದ ವಿಜಯ ಸಿಂಧೂರ ನಿನ್ನೆ ನಿಧನರಾದರು. ಅವರಿಗೆ 84 ವರ್ಷ ವಯಸ್ಸಾಗಿತ್ತು. 1965 ರಲ್ಲಿ ಲಲಿತ ಕಲಾ ಅಕಾದೆಮಿ ಮತ್ತು ಚೆನ್ನೈ ಕೇಂದ್ರ ಲಲಿತಕಲಾ ಅಕಾದೆಮಿಯ, ವಿಭಾಗೀಯ ಕೇಂದ್ರದ ಸದಸ್ಯರಾಗಿ, ಗಣನೀಯ ಸೇವೆ ಸಲ್ಲಿಸಿದ್ದರು. ವಿಜಯ ಸಿಂಧೂರ ಅವರಿಗೆ ವೆಂಕಟಪ್ಪ ಪ್ರಶಸ್ತಿ, ರಾಷ್ಟ್ರೀಯ ಲಲಿತ ಕಲಾ ಅಕಾದೆಮಿ ಪ್ರಶಸ್ತಿ ಸೇರಿದಂತೆ, ಹಲವು ಪ್ರಶಸ್ತಿಗಳು ಸಂದಿವೆ. ಗಣ್ಯರು ಕಂಬನಿ ಮಿಡಿದಿದ್ದಾರೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಇಂದು ವಿಶ್ವ ಹೃದಯ ಆರೋಗ್ಯ ದಿನ.

<><><>

ಹೊಸ ದಿಲ್ಲಿಯ ಕೇಂದ್ರ ಸಾಹಿತ್ಯ ಅಕಾದೆಮಿ ಆಯೋಜಿತ, ಲೇಖಕರೊಂದಿಗೆ ಭೇಟಿ ಕಾರ್ಯಕ್ರಮದಲ್ಲಿ, ಧಾರವಾಡದ ಹಿರಿಯ ಲೇಖಕಿ ಮಾಲತಿ ಪಟ್ಟಣಶೆಟ್ಟಿ ಅವರು, ಇಂದು ಭಾನುವಾರ ಬೆಳಗ್ಗೆ 10 ಗಂಟೆಗೆ, ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ತಮ್ಮ ವಿಚಾರಗಳನ್ನು ಹಂಚಿಕೊಳ್ಳಲಿದ್ದಾರೆ.

<><><>

ಕಂದಾಯ ಇಲಾಖೆಯ ಗ್ರಾಮ ಆಡಳಿತಾಧಿಕಾರಿ ಹುದ್ದೆಗಳಿಗೆ, ಕಡ್ಡಾಯ ಕನ್ನಡ ಭಾ ೆ ಪರೀಕ್ಷೆ, ಇಂದು ರಾಜ್ಯದ ವಿವಿಧ ಪರೀಕ್ಷಾ ಕೇಂದ್ರಗಳಲ್ಲಿ ಜರುಗಲಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಅಕ್ಟೋಬರ್ 2, ರಾಜ್ಯಾದ್ಯಂತ 'ಗಾಂಧಿ ನಡಿಗೆ' ಹಾಗೂ 'ಸ್ವಚ್ಛತೆಯ ಪ್ರತಿಜ್ಞಾ ವಿಧಿ ಸ್ವೀಕಾರ' – ಡಿ.ಕೆ. ಶಿವಕುಮಾರ.
- ಕ್ರೀಡಾ ಮನೋಭಾವದ ಸ್ಪರ್ಧೆ, ಬದುಕನ್ನು ಸರ್ವಾಂಗ ಸುಂದರಗೊಳಿಸುತ್ತದೆ – ಎಚ್.ಕೆ.ಪಾಟೀಲ.
- ಸಂಪೂರ್ಣತಾ ಅಭಿಯಾನ, 90 ದಿನಗಳ ಬಳಿಕ ನಾಳೆ, ರಾಜ್ಯದ ಏಳು ಜಿಲ್ಲೆಗಳಲ್ಲಿ ಸಮಾರೋಪ.
- ಇಂದು ಬೆಳಗ್ಗೆ 11 ಗಂಟೆಗೆ, ಪ್ರಧಾನಮಂತ್ರಿಯವರಿಂದ, 'ಮನದ ಮಾತು.'

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>